ಸಂಸ್ಥೆಯವರು ಹಣ ಮಾಡುತ್ತಿದ್ದಾರೆ ಇದನ್ನು ತಡೆಗಟ್ಟುವುದಕ್ಕೆ ಬೇರೆ ಯಾವುದಾದರೊಂದು ಮಾರ್ಗ ನೋಡಬೇಕು, ಆ ದೃಷ್ಟಿಯಿಂದ ತಾವು ಒಂದು ಸಮಿತಿ ರಚನೆ ಮಾಡಿ ಆ ಸಮಿತಿ ನಿರ್ದೇಶನದ ಮೂಲಕ ಕಾರ್ಯಕ್ರಮವನ್ನು ಹಾಕಿಕೊಳ್ಳಬಹುದು ಅಂತ ನಮ್ಮ ಹೈಕೋರ್ಟಿನವರು ಡೈರೆಕ್ಷನ್ ಕೊಟ್ಟರು. ಅವರು ಕೊಟ್ಟ ಡೈರೆಕ್ಷನ್ ಪ್ರಕಾರ 16-3-92ರಲ್ಲಿ ಏನು ರಿಟ್ ಹಾಕಿದ್ದರ ಬಗ್ಗೆ ಸ್ಟೇ ಕೊಟ್ಟಿದ್ದರು ಅದನ್ನು ಕಿತ್ತು ಹಾಕಿದರು. ಅನಂತರ ನಾವು ಸಮಿತಿ ರಚಿಸಿದ್ದು. ಆ ಸಮಿತಿ ಕೊಟ್ಟ ವರದಿಯ ಪ್ರಕಾರ ನಾವು ಒಂದು ನಿರ್ಣಯ ತೆಗೆದುಕೊಂಡು ಆ ಆಜ್ಞೆಯನ್ನು ಜಾರಿ ಮಾಡುವುದಕ್ಕೆ ಮತ್ತೆ ಪ್ರಯತ್ನ ಮಾಡಿದೆವು. ಮತ್ತೆ ಅವರು ಕೋರ್ಟಿಗೆ ಹೋಗಿ ಸ್ಟೇ ತಂದರು. ಮತ್ತೆ ಸಮಿತಿ ರಚಿಸಬೇಕಾಗಿದೆ. ಆ ಸಮಿತಿ ನಿರ್ಣಯವನ್ನು ನಾವು ಹೈಕೋರ್ಟಿಗೂ ಕೊಡಬೇಕಾಗುತ್ತದೆ ಮತ್ತು ಹೈಕೋರ್ಟ್ ಒಪ್ಪಿದ ಮೇಲೆ ಜಾರಿಗೊಳಿಸತತಕ್ಕಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ ಈ ಅನುದಾನ ರಹಿತ ಸಂಸ್ಥೆಗಳು ಬಹಳ ಜನರಿಂದ ಏನು ಹಣವನ್ನು ಕೀಳುತ್ತಿವೆ ಇದನ್ನು ತಡೆಗಟ್ಟುವುದಕ್ಕೆ ಸರ್ಕಾರದಿಂದ ಸಾಕಷ್ಟು ಪ್ರಯತ್ನ ನಡೆದಿದೆ. ಮುಂಬರುವ ದಿವಸಗಳಲ್ಲಿ ಸಮಿತಿ ರಚಿಸಿ ಅವರಿಂದ ಒಂದು ನಿರ್ಣಯ ಪಡೆದು ಆ ನಿರ್ಣಯದಂತೆ ನಾವು ಶುಲ್ಕವನ್ನು ವಿಧಿಸತಕ್ಕಂಥ ಕಾರ್ಯಕ್ರಮವನ್ನು ಹಾಕಿಕೊಂಡು ಸರಿಯಾಗಿ ಇದನ್ನು ಕೊಂಡೊಯ್ಯುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಹೆಚ್.ಎಂ. ರೇವಣ್ಣ:– ಮಾನ್ಯ ಅಧ್ಯಕ್ಷರೇ, ನನಗೆ ಸ್ಪಷ್ಟವಾದ ಉತ್ತರ ಬರಲಿಲ್ಲ. ಇವತ್ತು ಉನ್ನತ ಶಿಕ್ಷಣಕ್ಕೆ ಎಷ್ಟು ಆದ್ಯತೆ ಕೊಟ್ಟಿದ್ದೇವೆ ಅಷ್ಟೇ ಆದ್ಯತೆ ಪ್ರಾಥಮಿಕ ಹಂತದ ಶಿಕ್ಷಣಕ್ಕೆ ಮೊದಲು ನಾವು ಕೊಡಬೇಕಾಗುತ್ತದೆ. ತಾವು 1985ನೇ ಇಸವಿಯಲ್ಲಿ ಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆ ಅಂತ ಹೇಳಿದಿರಿ. ನಾವು ಈಗ 1993ನೇ ಇಸವಿಯಲ್ಲಿದ್ದೇವೆ. ಇಷ್ಟು ವರ್ಷಗಳಾದರೂ ಇದರ ಬಗ್ಗೆ ಕಾಳಜಿ ವಹಿಸದೆ ಕೆಳ ಹಂತದ ಶಿಕ್ಷಣಕ್ಕೆ ತಾವು ಗುರುತರವಾದ ಹೊಣೆ ವಹಿಸದಿದ್ದರೆ ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗುತ್ತದೆ. ಇವತ್ತು ಕೂಡ ತಾವು ನೋಡುತ್ತಿದ್ದೇವೆ, ಮಾಡುತ್ತಿದ್ದೇವೆ ಎನ್ನತಕ್ಕಂಥ ಉತ್ತರ ಕೊಟ್ಟರೆ ಹೇಗೆ ? ಸಮಿತಿ ರಚನೆ ಮಾಡುವುದು ಕಷ್ಟವೇನೂ ಅಲ್ಲ. ಸುಪ್ರೀಂ ಕೋರ್ಟಿನಿಂದ ಆರ್ಡರ್ ಬಂದ ತಕ್ಷಣ ಉನ್ನತ ಶಿಕ್ಷಣಕ್ಕೆ ಅಂದರೆ ವೈದ್ಯಕೀಯ ಮತ್ತು ಇಂಜನೀಯರಿಂಗ್‌ಗೆ ಹೇಗೆ ಸಮಿತಿ ಮಾಡಿದ್ದೀರಿ. ಅದೇ ರೀತಿ ಇದಕ್ಕೂ ಒಂದು ಸಮಿತಿ ಮಾಡುವುದಕ್ಕೆ ತೊಂದರೆ ಏನು ? ಈಗ ಸಮಿತಿಯನ್ನು ಅನೌನ್ಸ್ ಮಾಡುವಂಥ ತಾರೀಖು ಕೊಡಬೇಕು, ಜೊತೆಗೆ ಬಿಲ್ಡಿಂಗ್ ಫಂಡ್ ಕೊಡದಿದ್ದರೆ ನಿಮಗೆ ಸೀಟು ಕೊಡುವುದಿಲ್ಲ ಎನ್ನತಕ್ಕಂಥ ನೋಟೀಸ್ ಅನ್ನು ಅವರು ವಿದ್ಯಾರ್ಥಿಗಳಿಗೆ ಕೊಡುತ್ತಿದ್ದಾರೆ. ಬಿಲ್ಡಿಂಗ್ ಫಂಡ್ ಕೊಟ್ಟರೆ ಮಾತ್ರ ಸೇರಿಸಿಕೊಳ್ಳುತ್ತೇವೆ ಅಂತ ಹೇಳುತ್ತಿದ್ದಾರೆ. ಇವರ ಬಗ್ಗೆ ಕಾರ್ಯಕ್ರಮ ತೆಗೆದುಕೊಂಡು ಇದನ್ನು ಅವರು ಕಡ್ಡಾಯ ಮಾಡಿದರೆ ನಿಜವಾಗಿಯೂ ಯಾವ ಮಕ್ಕಳೂ ಓದುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಮಾನ್ಯ ಮಂತ್ರಿಗಳು ಸರಿಯಾದ ಉತ್ತರ ಕೊಡಬೇಕು.

ಡಾ॥ಹೆಚ್.ಡಿ. ಲಮಾಣಿ:– ಕೋರ್ಟಿನಲ್ಲಿ ಕೇಸ್ ಇರುವುದರಿಂದ ನಾವು ಏನೂ ಮಾಡುವುದಕ್ಕೆ ಬರುವುದಿಲ್ಲ. ಸಮಿತಿ ರಚಿಸುವುದು ನಮ್ಮ ಕೈಯಲ್ಲಿದೆ, ಆದ್ದರಿಂದ ಇನ್ನು ಒಂದು ವಾರ ಅಥವಾ ಹದಿನೈದು ದಿವಸಗಳಲ್ಲಿ ಸಮಿತಿ ರಚಿಸುತ್ತೇವೆ. ಅವರಿಗೆ ಇಂತಿಷ್ಟು ಸಮಯ ಅಂತ ಕೊಟ್ಟು ಆ ಸಮಯದಲ್ಲಿ ರಿಪೋರ್ಟ್ ಕೊಡುವುದಕ್ಕೆ ಹೇಳಿ ಆ ರಿಪೋರ್ಟ್ ಪಡೆದು ಅದರಂತೆ ಮುಂದಿನ ಶೈಕ್ಷಣಿಕ ವರ್ಷದಲ್ಲಿ ಸೂಕ್ತ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ

418 (2123): ಶ್ರೀ ಎ. ರುಕ್ಮಯ್ಯ ಪೂಜಾರಿ (ವಿಟ್ಲ):–

ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರಿ ಆಸ್ಪತ್ರೆಗಳಲ್ಲಿ ಔಷಧಿಗಳ ಕೊರತೆ ಇರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಆ) ಇದರಿಂದ ವೈದ್ಯರು ರೋಗಿಗಳಿಗೆ ಚೀಟಿ ಕೊಟ್ಟು ಹೊರಗಿನಿಂದ ಔಷಧಿ ತರಿಸುವುದರಿಂದ ಬಡವರಿಗೆ ತೊಂದರೆಯಾಗುತ್ತಿರುವುದು ಸರ್ಕಾರಕ್ಕೆ ಗೊತ್ತಿದೆಯೇ;

ಇ) ಇದನ್ನು ಸರಿಪಡಿಸಲು ಸರ್ಕಾರ ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು):–

ಅ) ಬಂದಿದೆ.

ಆ) ಗೊತ್ತಿದೆ.

ಇ) ಕಳೆದ ವರ್ಷದ ಆಯವ್ಯಯ ಅವಕಾಶಕ್ಕಿಂತ ಶೇ. 50 ರಷ್ಟು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಆಸ್ಪತ್ರೆಗಳಿಗೆ ಅಗತ್ಯವಿರುವ ಔಷಧಿಗಳ ಪ್ರಮಾಣವನ್ನು ಗುರುತಿಸುವ ಬಗ್ಗೆ ಪರಿಶೀಲಿಸಲು ಸರ್ಕಾರವು ಸಮಿತಿಯನ್ನು ರಚಿಸಲಾಗಿದೆ. ಮತ್ತು ಆ ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಔಷಧಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದರೆ, ಬಂದಿದೆ ಎಂದು ಉತ್ತರದಲ್ಲಿ ಹೇಳಿದ್ದಾರೆ. ಇದರಿಂದ ಬಡವರಿಗೆ ತೊಂದರೆಯಾಗುತ್ತಿದೆ ಎಂದು ಸಹಾ ಹೇಳಿದ್ದಾರೆ. ಆದರೆ ಇಲ್ಲಿ ಪ್ರಶ್ನೆ ಇರುವಂಥಾದ್ದು ಸರ್ಕಾರಿ ಆಸ್ಪತ್ರೆಯ ಅಗತ್ಯ ಏನು ? ಗ್ರಾಮಾಂತರ ಪ್ರದೇಶದ ಬಡವರಿಗೆ ಅನುಕೂಲವಾಗದಿದ್ದ ಮೇಲೆ ಅದರ ಅಗತ್ಯ ಏನು ? ಅಲ್ಲಿ ಔಷಧಗಳು ಇಲ್ಲ, ಅಲ್ಲಿ ಔಷಧ ಇಲ್ಲವೆಂದು ಹೇಳಿ ಬೇರೆ ಮದ್ದನ್ನು ಕೊಡುತ್ತಾರೆ. ಇದರಿಂದ ರೋಗ ಗುಣವಾಗುವುದಿಲ್ಲ. ಅಲ್ಲಿಗೆ ಬೇಕಾಗುವಷ್ಟು ಔಷಧವನ್ನು ಕೊಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಕಳೆದ ವರ್ಷಕ್ಕಿಂತ 50 ಪರ್ಸೆಂಟ್ ಜಾಸ್ತಿ ಮಾಡುತ್ತೇವೆಂದು ಹೇಳಿದ್ದೀರಾ. ಔಷಧ ಕೊಡದೆ ಬ್ಯಾಂಡೇಜ್ ಸಾಮಾನುಗಳು ಇಟ್ಟರೆ ಏನೂ ಪ್ರಯೋಜನವಾಗುವುದಿಲ್ಲ. ಅಲ್ಲಿಗೆ ಎಷ್ಟು ಔಷಧಿ ಬೇಕೋ ಅಷ್ಟನ್ನು ಕೊಡಲಿಕ್ಕೆ ನೀವು ಕ್ರಮ ತೆಗೆದುಕೊಳ್ಳುತ್ತೀರಾ ? ಇದಕ್ಕೆ ನನಗೆ ಸರಿಯಾದ ಉತ್ತರ ಬೇಕಾಗಿದೆ.

ಶ್ರೀ ಬ್ಲೆಸಿಯಸ್ ಎಂ. ಡಿಸೋಜ (ಮುಖ್ಯಮಂತ್ರಿಗಳ ಪರವಾಗಿ):– ಸನ್ಮಾನ್ಯ ಅಧ್ಯಕ್ಷರೆ, ತಮಗೆ ಗೊತ್ತಿದ್ದ ಹಾಗೆ ಈ ಔಷಧಿಗಳ ಬೆಲೆ ಬಹಳ ಜಾಸ್ತಿಯಾಗಿದೆ. ಹೋದ ವರ್ಷದ ಬಜೆಟ್‌ನಲ್ಲಿ 20 ಕೋಟಿ ರೂಪಾಯಿ ಔಷಧಿಯನ್ನು ಪರ್ಚೇಸ್ ಮಾಡಲಿಕ್ಕೆ ಅವಕಾಶ ಇತ್ತು. ಈ ವರ್ಷ 50ಪರ್ಸೆಂಟ್ ಜಾಸ್ತಿ ಮಾಡಿರುವುದರಿಂದ ಈ ವರ್ಷ 30 ಕೋಟಿ ರೂಪಾಯಿ ಔಷಧಿ ಪರ್ಚೇಸ್ ಮಾಡಲಿಕ್ಕೆ ಬಜೆಟ್‌ನಲ್ಲಿ ಪ್ರಾವಿಷನ್ ಮಾಡಿದ್ದಾರೆ. ಸನ್ಮಾನ್ಯ ರುಕ್ಮಯ್ಯ ಪೂಜಾರಿಯವರು ಹೇಳಿದ ಹಾಗೆ, ಎಲ್ಲಾ ಕಡೆ ಬೇಕಾದ ಔಷಧಗಳು ಸಿಗುವುದಿಲ್ಲ. ಎಲ್ಲಾ ಕಡೆ ಒಂದೇ ತರಹದ ರೋಗ ಇರುವುದಿಲ್ಲ. ಅದಕ್ಕೆ ಈ ಸಲ ಡೈರೆಕ್ಟರ್ ಆಫ್ ಹೆಲ್ತ್ ಸರ್ವೀಸಸ್ ಇವರ ಛೇರ್ಮನ್‌ಷಿಪ್‌ನಲ್ಲಿ ಒಂದು ಕಮಿಟಿ ಮಾಡಿ ಯಾವ ಆಸ್ಪತ್ರೆಗೆ ಯಾವ ತರಹದ ಔಷಧಿ ಬೇಕೆಂದು ಪರಿಶೀಲನೆ ಮಾಡುತ್ತಾರೆ. ಆಲ್ಲಿಂದ ರಿಪೋರ್ಟ್ ಬಂದ ಕೂಡಲೇ ಯಾವ ಆಸ್ಪತ್ರೆಗೆ ಯಾವ ಔಷಧಿ ಬೇಕೋ ಅದನ್ನು ನಮ್ಮ ಡಿಪಾರ್ಟ್‌ಮೆಂಟಿನವರು ಒದಗಿಸುತ್ತಾರೆ.

ಶ್ರೀ ಎ. ರುಕ್ಮಯ್ಯ ಪೂಜಾರಿ:– ಆಸ್ಪತ್ರೆಗಳಲ್ಲಿ ಔಷಧಿಗಳು ಇಲ್ಲವೆಂದು ರೋಗಿಗಳಿಗೆ ಚೀಟಿ ಕೊಡುತ್ತಾರೆ. ರೋಗಿಗಳು [illegible]

ಹಣವನ್ನು ನೀವು ಪಾವತಿ ಮಾಡುತ್ತೀರಾ ? ನಿಮ್ಮಲ್ಲಿ ಔಷಧ ಇಲ್ಲವೆಂದು ಅವರು ಅಂಗಡಿಯಿಂದ ತರುತ್ತಾರೆ. ಅಂಗಡಿಯಿಂದ ತರುವುದಕ್ಕೆ ಅವರ ಹತ್ತಿರ ಹಣ ಇರುವುದಿಲ್ಲ. ಈ ಬಿಲ್‌ಗೆ ಹಣ ಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ಸನ್ಮಾನ್ಯ ಅಧ್ಯಕ್ಷರೆ, ಬಹಳಷ್ಟು ಔಷಧಿಗಳು ನಮ್ಮ ಆಸ್ಪತ್ರೆಯಲ್ಲಿ ಇವೆ. ಕೆಲವು ಸಂದರ್ಭಗಳಲ್ಲಿ ಕೆಲವು ಔಷಧಿಗಳು ಬೇಗನೆ ಖಾಲಿಯಾಗಿ ಬಿಡುತ್ತವೆ. ಅಂಥ ಸಮಯದಲ್ಲಿ ಮಾತ್ರ ಡಾಕ್ಟರ್‌ರವರು ಆ ಚೀಟಿಯನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ:– ಇಡೀ ರಾಜ್ಯದಲ್ಲಿರುವ ಎಲ್ಲಾ ಆಸ್ಪತ್ರೆಗಳಲ್ಲಿ ಔಷಧಿಗಳಿಲ್ಲ ಎನ್ನುವ ಪ್ರಶ್ನೆ ಇದೆ. ಈಗ ತಾವು ಮಾರ್ಚ್ ಒಳಗೆ ಔಷಧಿಗಳನ್ನು ಸರಬರಾಜು ಮಾಡಬೇಕಾಗಿತ್ತು ? ಕಳೆದ 3 ತಿಂಗಳಿನಿಂದ ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ ಮತ್ತು ಪಿಹೆಚ್‌ಸಿ ಗಳಿಗೆ ಔಷಧಗಳನ್ನು ಸರಬರಾಜೇ ಮಾಡಿಲ್ಲ. ಇದರಿಂದ ಅಲ್ಲಿಗೆ ಬರುವಂಥ ರೋಗಿಗಳಿಗೆ ತುಂಬಾ ತೊಂದರೆಯಾಗಿದೆ. ರೋಗಿಗಳ ಸಂಖ್ಯೆಯೂ ಜಾಸ್ತಿಯಾಗಿದೆ. ಈ ಪರಿಸ್ಥಿತಿಯಲ್ಲಿ ನಾನು ನಿಮ್ಮನ್ನು ವಿನಂತಿ ಮಾಡುವುದು, ನೀವು ಔಷಧಿಗಳನ್ನು ಬಿಡುಗಡೆ ಮಾಡಿದ್ದೀರಾ ? ಎರಡನೆಯದು ತಾವು 30 ಕೋಟಿ ರೂಪಾಯಿ ಔಷಧಿಗಳನ್ನು ಖರೀದಿ ಮಾಡುತ್ತೇವೆಂದು ಹೇಳುತ್ತಿದ್ದೀರಿ. ಆದರೆ ಪಿಹೆಚ್‌ಸಿಗೆ ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗೆ ಎಷ್ಟು ಸಾವಿರ ಔಷಧಿಗಳನ್ನು ಕೊಡುತ್ತಿದ್ದೀರಿ ? ಈಗ ಎಷ್ಟು ಕೊಡಬೇಕೆಂದು ತೀರ್ಮಾನ ಮಾಡಿದ್ದೀರಿ ?

ಶ್ರೀ ಬ್ಲೆಸಿಯಸ್ ಎಂ. ಡಿಸೋಜ:– ತಾಲ್ಲೂಕು ಮಟ್ಟದ ಆಸ್ಪತ್ರೆಗಳಿಗೆ 30 ಸಾವಿರದಷ್ಟು ಔಷಧಿಗಳನ್ನು ಕೊಡುತ್ತಿದ್ದೆವು ಇನ್ನು ಮುಂದೆ ಅವುಗಳಿಗೆ 50 ಪರ್ಸೆಂಟ್‌ನಷ್ಟು ಹೆಚ್ಚು ಔಷಧಿಗಳನ್ನು ಒದಗಿಸಲಾಗುವುದು.

ಅಧ್ಯಕ್ಷರು:– ಶ್ರೀಮತಿ ಮೋಟಮ್ಮನವರ ಪ್ರಶ್ನೆಯನ್ನು ಅವರ ಪರವಾಗಿ ಶ್ರೀ ರಾಜೂಗೌಡರು ಕೇಳಬಹುದು.

ಮೂಡಿಗೆರೆ ತಾಲ್ಲೂಕಿನ ಜಾವಳಿಗೆ ಆರೋಗ್ಯ ಕೇಂದ್ರ ಮಂಜೂರಾತಿ

2136: ಶ್ರೀಮತಿ ಮೋಟಮ್ಮ (ಮೂಡಿಗೆರೆ):–

ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಮೂಡಿಗೆರೆ ತಾಲ್ಲೂಕಿನ ಜಾವಳಿಗೆ ಆರೋಗ್ಯ ಕೇಂದ್ರ ಮಂಜೂರಾಗಿದ್ದು ಯಾವಾಗ;

ಆ) ಇಲ್ಲಿಯ ತನಕ ಸರಿಯಾದ ಸಿಬ್ಬಂದಿ (ಡಾಕ್ಟರ್, ನರ್ಸಸ್) ವಾಹನ, ಕೋಲ್ಡ್ ಸ್ಟೋರೇಜ್ ಪೀಠೋಪಕರಣಗಳು, ಹಾಸಿಗೆ, ಸರಿಯಾದ ಕಟ್ಟಡ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಈ ಬಗ್ಗೆ ಸರ್ಕಾರವು ಗಮನ ಹರಿಸದಿರಲು ಕಾರಣವೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು):–

ಅ) ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಎಫ್‌ಡಬ್ಲ್ಯು 158 ಸಿಜಿಎಂ 89; ದಿನಾಂಕ: 31-3-91ರಲ್ಲಿ ಪ್ರಾಥಮಿಕ ಆರೋಗ್ಯ ಘಟಕವನ್ನು ಪ್ರಾಥಮಿಕ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ.

ಆ) ಬಂದಿದೆ. ವೈದ್ಯರ ಹುದ್ದೆ ಖಾಲಿ ಇದ್ದು, ಗುತ್ತಿಗೆ ಆಧಾರದ ಮೇಲೆ ನೇಮಿಸಿದ ವೈದ್ಯರು